ಬಂಡುಪದಗಳನ್ನು ಕೇಳಿಸಿಕೊಳ್ಳಲಿಕ್ಕೆಂದೇ ಬೇರೆ ಊರಿನ ಹರೆಯದವರ ಜೊತೆಗೆ ದೊಡ್ಡವರೂ ಸೇರಿಬಿಡುತ್ತಿದ್ದರು. ಆಗೆಲ್ಲ ಬೇಕೆಂದೇ ಹನುಮಂತಣ್ಣ ಬಂಡುಪದಗಳನ್ನು ಬೇಗ ಎತ್ತಿಕೊಳ್ಳದೆ ಅಮ್ಮನ ಹೊಗಳಿಕೆಪದಗಳನ್ನು ಬಹಳ ಹೊತ್ತು ಹಾಡುತ್ತಿದ್ದ. ತಿರುಗಾ ಬರುಗಾ ಹೊಗಳಿಕೆ ಪದಗಳನ್ನೇ ಹಾಡುತ್ತಿದ್ದರೆ, ಬಂಡುಪದಗಳಿಗೇ ಕಾಯುತ್ತಿದ್ದವರು ಕಾಯುತ್ತಿದ್ದರೇ ಹೊರತು ಬಂಡುಪದ ಹಾಡು ಅಂತಾ ಯಾರೂ ಹನುಮಂತಣ್ಣನಿಗೆ ಹೇಳುತ್ತಿರಲಿಲ್ಲ. ಹಾಗೆ ಯಾರಾದರೂ ಕೋರಿಕೊಂಡರೆ ಜೊತೆಯವರೆಲ್ಲ 'ಓ ಬಾಯಿಗೆ ಬಂದೈತೆ ಕಣಪ್ಪಾ' ಅಂತಾ ಆಡಿಕೊಳ್ಳುತ್ತಿದ್ದರು. ಉತ್ಸವದ ಮೆರವಣಿಗೆಯಲ್ಲಿ ಬರುತ್ತಿದ್ದ ಲಕ್ಕಮ್ಮನೇ ಮುಂದಕ್ಕೆ ಬರದೆ ನಿಂತುಬಿಡುತ್ತಿದ್ದುದೂ ಉಂಟು. ಆಗ ಆಸಾದಿ ಮುಂದೆ ಬಂದು ಬಂಡುಹಾಡು ಹಾಡಿ ಲಕ್ಕಮ್ಮನನ್ನು ಮುಂದಕ್ಕೆ ಬರಲು ಬೇಡಿಕೊಳ್ಳುತ್ತಿದ್ದ. ಅದೇನು ಲಕ್ಕಮ್ಮನೇ ಆ ಹಾಡುಗಳನ್ನು ಕೇಳಬೇಕೆಂದು ಬಯಸುತ್ತಿದ್ದಳೋ ಅಥವಾ ಮೆರವಣಿಗೆಯಲ್ಲಿ ಲಕ್ಕಮ್ಮನನ್ನು ಹೊತ್ತಿದ್ದವರು ಬಯಸುತ್ತಿದ್ದರೋ ತಿಳಿಯುತ್ತಿರಲಿಲ್ಲ. ಕಡೆಗೆ ದಡಿಮೀಸೆ ತಳವಾರ ಹನುಮನಾಯಕ 'ಅದ್ಯಾಕ್ಲ ಆಸಾದಿ, ಈ ಉಪ್ಪು ಉಳಿ ಇಲ್ದೇ ಇರೋವ್ನೇ ಎಷ್ಟೊತ್ತು ಆಡ್ತಿಯಲಾ, ಬಂಡುಪದ ಆಡದಿದ್ರೆ ಅದ್ಯಾವ ಸೀಮೆ ಆಸಾದಿನಲಾ ನೀನು?' ಎಂದು ಹನುಮಂತಣ್ಣನ ಕ್ಯಾಣವನ್ನು ಕೆಣಕಿದಾಗ ನಗುತ್ತಲೇ ಅವನು 'ಆಯ್ತು ತಗಳಣ್ಣೋ ನೀನು ಹಂಗನ್ನಲೀ ಅಂತಲೇ ಕಾದಿದ್ದೆ' ಅನ್ನುತ್ತ ಬಂಡುಪದಗಳನ್ನು ಹಾಡಲು ಶುರು ಮಾಡುತ್ತಿದ್ದ. ಅವುಗಳನ್ನು ಸರಿಯಾಗಿ ಕೇಳಿಸಿಕೊಳ್ಳಲು ಮಾತ್ರ ಎಲ್ಲ ಯಂಗೆಂಗೋ ಜಾಗ ಮಾಡಿಕೊಂಡು ಹನುಮಂತಣ್ಣನ ಸುತ್ತ ಜಮಾಯಿಸಿಬಿಡುತ್ತಿದ್ದರು. ಕೆಲವರಂತೂ ಬಂಡುಹಾಡುಗಳನ್ನು ಕೇಳಲಿಕ್ಕಾಗಿಯೇ ಅಂತರಗಟ್ಟೆ, ಆಸಂದಿ, ಹೆಸರಳ್ಳಿ, ಶೆಟ್ಟಿಕೆರೆ, ಮಣಕಿಕೆರೆ ಮುಂತಾದ ಆಸಾದಿಗಳಿರುವ ಜಾತ್ರೆಗಳನ್ನು ತಿರುಗುತ್ತಿದ್ದುದೂ ಉಂಟು.

ವರಗಲ ಗುಡಿಯಲ್ಲಿ ಸೇವೆ ಮುಗಿಸಿದ ಹನುಮಂತಣ್ಣನಿಗೆ ಇಂದ್ಯಾಕೋ ಮನೆಗೆ ಹೋಗುವ ತವಕ ಬರಲಿಲ್ಲ. ಒಂದು ವಾರದಿಂದ ಹೆಂಡ್ರು ಕೆಂಪಮ್ಮ 'ಇನ್ನೆಲ್ಲಾರ ಬಂಡುಪದ ಹಾಡಿದರೆ ಮಗನ ಕರಕೊಂಡು ಎತ್ತಗಾದರೂ ವಂಟೋಯ್ತಿನಿ' ಎಂದು ನೋಟಿಸು ಕೊಟ್ಟಿದ್ದಳು. ಹನುಮಂತಣ್ಣ ಕೆಂಪಮ್ಮನ ಮದುವೆಯಾದ ಹೊಸದರಲ್ಲಿ ಅವಳ ಗೆಣೆಕಾತಿಯರು ಇವಳನ್ನು ಕಂಡು ಅಸೂಯೆ ಪಡುತ್ತಿದ್ದುದೂ ಉಂಟು. ಹನುಮಂತಣ್ಣ ಒಳ್ಳೆ ಹೋರಾದ ಹುಡುಗ. ದನಿಯೆತ್ತಿ ಹಾಡಿದರೆ ಅರ್ಧಮೈಲಿಗೆ ಕೇಳುವಂತಹ ಕಂಠ. ಮೊದ ಮೊದಲು ಎಲ್ಲ ಹಿತವಾಗೇ ಇತ್ತು. ಆದರೆ ಬಡತನವನ್ನೆ ಹಾಸಿ ಅದನ್ನೆ ಹೊದ್ದು ಬದುಕಿ ಅವಳಿಗೂ ರೋಸಿ ಹೋಗಿತ್ತು. ಹುಟ್ಟಿದ ಒಂದು ಗಂಡು ಮತ್ತೊಂದು ಹೆಣ್ಣು ಮಕ್ಕಳಲ್ಲಿ, ಹೆಣ್ಣು ಕೂಸು ಎರಡನೆಯ ವರುಷದಲ್ಲಿ ಯಾವುದೋ ಕಾಯಿಲೆಗೆ ತುತ್ತಾಗಿ ತೀರಿಕೊಂಡಿತು. 'ನಿನ್ನ ಮಗಾ ಬಲೇ ಬುದ್ಧಿವಂತ ಅವ್ನ ಸ್ಕೂಲ ಬಿಡಿಸಬೇಡ' ಎಂದು ಶಾಲೆಯ ಮೇಷ್ಟ್ರು ಹನುಮಂತಣ್ಣನನ್ನು ಕರೆಸಿ ಹೇಳಿದಾಗ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದ ಅವನು ಕೆಂಪಮ್ಮನಿಗೆ ಆ ಮಾತನ್ನು ವರ್ಗಾಯಿಸಿದ್ದ. ಕೆಂಪಮ್ಮ ಆ ಮಾತನ್ನು ಎಚ್ಚರದಿಂದ ಸಾಕಿ ಬೆಳೆಸಿದ್ದಳು. ಈಗ ಮಗಾ ದೊಡ್ಡಮೇಟಿಕುರ್ಕೆಗೆ ಕಾಲೇಜಿಗೆ ಹೋಗಿಬರುತ್ತಿದ್ದ. 'ನಿನ್ನ ಆಸಾದಿಸ್ಯಾವೆ ನಿನ್ನ ಕಾಲಕ್ಕೆ ಮುಗಿದುಹೋಗಲಿ ಅವನಿಗೆ ಎಂದಾದರೂ ಹಲಗೆ ಮುಟ್ಟಿಸೀಯ' ಎಂದು ಹನುಮಂತಣ್ಣನಿಗೆ ತಾಕೀತು ಮಾಡಿದ್ದ ಕೆಂಪಮ್ಮ ಮಗ ಹಲಗೆಯನ್ನು ಮುಟ್ಟದಂತೆ ನೋಡಿಕೊಂಡಿದ್ದಳು. ಅದಕ್ಕೆ ಮತ್ತೊಂದು ಕಾರಣವೂ ಇತ್ತು. ಕಾಲೇಜಿಗೆ ಸೇರಿದ ಹೊಸದರಲ್ಲಿ ತುಂಬಾ ಉತ್ಸಾಹದಿಂದ ಕುಣಿಕುಣಿಯುತ್ತ ಕಾಲೇಜಿಗೆ ಹೋಗಿಬರುತ್ತಿದ್ದವನು ಒಂದು ದಿನ ಬಂದವನೇ ಬೇಜಾರಿನಿಂದ ಅವ್ವನ ಹತ್ತಿರ ತನ್ನ ಸಂಕಟವನ್ನು ಹೇಳಿಕೊಂಡಿದ್ದ. ಕಾಲೇಜಿನ ಕೆಲವು ಹುಡುಗರು ಇವನು ಅಸಾದಿಯ ಮಗನೆಂದು ಗೊತ್ತಾಗಿ ಗುಟ್ಟಾಗಿ ಬಂಡುಪದ ಹೇಳಲು ಒತ್ತಾಯಿಸಲಾರಂಭಿಸಿದ್ದರು. ಕೆಲವು ಬಂಡುಪದಗಳು ತನಗೆ ಬರುತ್ತಿದ್ದರೂ ಗೊತ್ತಿಲ್ಲ ಎಂದು ಹೇಳಿ ತಪ್ಪಿಸಿಕೊಂಡಿದ್ದ. ಆದರೆ ಆ